# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-560 056

ಸಂಖ್ಯೆ. ಎಸಿಎ-2/ವಿ.ವಿ.ಪ.ಸಾ ಸಭೆ/2020-21 ದಿನಾಂಕ: 04/02/2021

ಗೆ.

ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು-56.

ಮಾನ್ಯರೆ,

ವಿಷಯ: ದಿನಾಂಕ: 28/12/2020ರಂದು ಆನ್-ಲೈನ್ ಮೂಲಕ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸಿಕೊಡುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 03/02/2021.

*****

ದಿನಾಂಕ: 28/12/2020ರಂದು ಆನ್-ಲೈನ್ ಮೂಲಕ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಯನ್ನು, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮ 4.18ರ ಅಡಿಯಲ್ಲಿ ಈ ಪತ್ರದ ಜೊತೆ ಲಗತ್ತಿಸಿ ಕಳುಹಿಸಿ ಕೊಡಲಾಗಿದೆ.

ಈ ನಡಾವಳಿಗಳು ತಲುಪಿದ ಹದಿನಾಲ್ಕು ದಿವಸಗಳೊಳಗೆ ತಮ್ಮಿಂದ ಯಾವುದೇ ಆಕ್ಷೇಪಗಳು ಬಾರದಿದ್ದಲ್ಲಿ ಸದರಿ ನಡಾವಳಿಗಳಿಗೆ ವಿಶ್ವವಿದ್ಯಾಲಯದ ಪರಿನಿಯಮದಂತೆ ತಮ್ಮ ಸಮ್ಮತಿ ಇರುತ್ತದೆಂದು ಭಾವಿಸಲಾಗುತ್ತದೆ.

ಆದೇಶಾನುಸಾರ

K. Jyothi
ಕುಲಸಚಿವರು. 5/2/2021

**ಪ್ರತಿಗಳು:**

1. ಪ್ರಧಾನ ಕಾರ್ಯದರ್ಶಿಯವರು, ರಾಜ್ಯಪಾಲರ ಕಾರ್ಯಾಲಯ, ರಾಜಭವನ, ಬೆಂಗಳೂರು – 01.
2. ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು – 01.
3. ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಗಳು/ಉಪಕುಲಸಚಿವರು/ಸಹಾಯಕ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4. ಕುಲಪತಿಯವರು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಯವರು – ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ:ಎಸಿಎ-2/ಎ2/ವಿ.ವಿ.ಪ./ಸಾ.ಸ/2020-21

ದಿನಾಂಕ: 04-02-2021

ದಿನಾಂಕ: 28-12-2020ರಂದು ಆನ್-ಲೈನ್ ತಂತ್ರಾಂಶದ ಮೂಲಕ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ವೇಣುಗೋಪಾಲ್. ಕೆ. ಆರ್. ಕುಲಪತಿಗಳು, ಬೆಂ.ವಿ.ಬೆಂ. | ಅಧ್ಯಕ್ಷರು |
| 2. | ಡಾ. ವತ್ಸಲ. ಎನ್. ಪ್ರಾಂಶುಪಾಲರು | - ಸದಸ್ಯರು |
| 3. | ಶ್ರೀಮತಿ ಪದ್ಮ. ವಿ, ಪ್ರಾಂಶುಪಾಲರು, | ಸದಸ್ಯರು |
| 4. | ಶ್ರೀಮತಿ ಆರ್. ಉಮಾ ಮಹೇಶ್ವರಿ, ಪ್ರಾಂಶುಪಾಲರು, | ಸದಸ್ಯರು |
| 5. | ಡಾ. ಧನಂಜಯ ಬಿ.ಆರ್. ಪ್ರಾಂಶುಪಾಲರು, | ಸದಸ್ಯರು |
| 6. | ಡಾ. ಎಂ. ಶೈಲಜ, ಪ್ರಾಂಶುಪಾಲರು, | ಸದಸ್ಯರು |
| 7. | ಡಾ. ಸುಧೀರ್ ಪೈ. ಕೆ.ಎಲ್. ಪ್ರಾಂಶುಪಾಲರು, | ಸದಸ್ಯರು |
| 8. | ಶ್ರೀಮತಿ ರೇಖಾ ಡಿ.ಜಿ, ಪ್ರಾಂಶುಪಾಲರು, | ಸದಸ್ಯರು |
| 9. | ಶ್ರೀಮತಿ ಸಿ. ತೇಜಸ್ವಿನಿ, ಪ್ರಾಂಶುಪಾಲರು, | ಸದಸ್ಯರು |
| 10. | ಶ್ರೀ. ಹರೀಶ್ ನಾಯ್ಕ್, ಪ್ರಾಂಶುಪಾಲರು, | ಸದಸ್ಯರು |
| 11. | ಡಾ. ಪಿ. ವಿಷ್ಣುಕಾಮತ್, ಪ್ರಾಧ್ಯಾಪಕರು, ಬೆಂ.ವಿ.ಬೆಂ. | ಸದಸ್ಯರು |
| 12. | ಪ್ರೊ. ಜಯಕುಮಾರ್ ಜಿ. ರೆಡ್ಡಿ, ಪ್ರಾಧ್ಯಾಪಕರು, ವಿಶ್ಯುಯಲ್‌ಆರ್ಟ್ಸ್ ವಿಭಾಗ, ಬೆಂ.ವಿ.ಬೆಂ. | ಸದಸ್ಯರು |
| 13. | ಡಾ. ಪುಟ್ಟಸ್ವಾಮಿ, ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ, ಬೆಂ.ವಿ.ಬೆಂ. | ಸದಸ್ಯರು |
| 14. | ಡಾ. ರಾಮಕೃಷ್ಣ ದಾಮ್ಲೆ, ಪ್ರಾಧ್ಯಾಪಕರು, ಬೆಂ.ವಿ.ಬೆಂ. | ಸದಸ್ಯರು |
| 15. | ಡಾ. ವೈ. ನಾಗರಾಜು, ಡೀನರು, ವಾಣಿಜ್ಯ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 16. | ಡಾ. ಹಶೀನ್ ತಾಜ್, ಡೀನರು, ಶಿಕ್ಷಣ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 17. | ಡಾ. ಪಿ. ದೀಪಾ ಶೈಣೈ. ಡೀನರು, ತಾಂತ್ರಿಕ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 18. | ಡಾ. ದಶರಥ ಎನ್. ಪ್ರಾಧ್ಯಾಪಕರು, ವಿಶ್ವವಿದ್ಯಾಲಯ ಕಾನೂನು ಕಾಲೇಜು, ಬೆಂ.ವಿ.ಬೆಂ. | ಸದಸ್ಯರು |
| 19. | ಗ್ರಂಥಪಾಲಕರು, ಬೆಂ.ವಿ.ಬೆಂ. | ಸದಸ್ಯರು |
| 20. | ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ಬೆಂ.ವಿ.ಬೆಂ. | ಸದಸ್ಯರು |
| 21. | ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಬೆಂ.ವಿ.ಬೆಂ. | ಸದಸ್ಯರು |
| 22. | ನಿರ್ದೇಶಕರು, ದೈಹಿಕ ಶಿಕ್ಷಣ ನಿರ್ದೇಶನಾಲಯ, ಬೆಂ.ವಿ.ಬೆಂ. | ಸದಸ್ಯರು |
| 23. | ಡಾ. ಜೆ.ಟಿ. ದೇವರಾಜು, ಕುಲಸಚಿವರು (ಮೌಲ್ಯಮಾಪನ), ಬೆಂ.ವಿ.ಬೆಂ. | ಸದಸ್ಯರು |
| 24. | ಶ್ರೀಮತಿ ಹೆಚ್. ಬಿ. ಪಾರ್ವತಿ. ವಿತ್ತಾಧಿಕಾರಿಗಳು, ಬೆಂ.ವಿ.ಬೆಂ. | ಸದಸ್ಯರು |
| 25. | ಶ್ರೀಮತಿ ಕೆ. ಜ್ಯೋತಿ. ಐ.ಎ.ಎಸ್., ಕುಲಸಚಿವರು, ಬೆಂ.ವಿ.ಬೆಂ. | ಸದಸ್ಯ ಕಾರ್ಯದರ್ಶಿ |

ಕುಲಸಚಿವರು ಮಾತನಾಡಿ, ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರಿ ವಿದ್ಯಾವಿಷಯಕ ಪರಿಷತ್ತಿಗೆ ಹೊಸದಾಗಿ ನಾಮ ನಿರ್ದೇಶನಗೊಂಡ ಡಾ. ವಿ.ವಿ. ಸುರೇಶ್ ಬಾಬು, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಡಾ. ರಾಮಕೃಷ್ಣ ದಾಮ್ಲೆ, ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಬೆಂ.ವಿ.ಬೆಂ–56, ಹಾಗೂ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಾದ ಶ್ರೀಮತಿ ಪದ್ಮ. ವಿ, ಶ್ರೀಮತಿ ಆರ್. ಉಮಾ ಮಹೇಶ್ವರಿ, ಡಾ. ಧನಂಜಯ ಬಿ.ಆರ್. ಶ್ರೀ. ಹರೀಶ್ ನಾಯ್ಕ್, ಡಾ. ಎಂ. ಶೈಲಜ, ಡಾ. ಸುಧೀರ್ ಪೈ. ಕೆ.ಎಲ್. ಶ್ರೀಮತಿ ರೇಖಾ ಡಿ.ಜಿ, ಹಾಗೂ ಶ್ರೀಮತಿ ಸಿ. ತೇಜಸ್ವಿನಿ, ಇವರುಗಳಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರಿದರು ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸುತ್ತಿರುವ, ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಾದ ಡಾ. ಸುಧಾಮಣಿ, ಡಾ. ಎಂ.ಜಿ. ಕೃಷ್ಣಮೂರ್ತಿ, ಡಾ. ಅನುರಾಧ. ಎಂ, ಶ್ರೀ ಪುರುಷೋತ್ತಮ, ಬಿ, ಶ್ರೀ ಜಿ.ಆರ್. ಸುಧಾಕರ, ಶ್ರೀ ದೇವೇಂದ್ರ ಕುಮಾರ ಪಾಠಕ್, ಶ್ರೀ. ಹೆಚ್. ಆರ್. ಕುಮಾರ ಸ್ವಾಮಿ, ಶ್ರೀ ಜಯರಾಮ, ಹಾಗೂ ಡಾ. ಎಮ್. ರಾಮಚಂದ್ರ ಮೋಹನ್, ಡೀನರು, ವಿಜ್ಞಾನ ನಿಕಾಯ, ಅವರುಗಳ ಸೇವೆಯನ್ನು ಸ್ಮರಿಸಿ ಸಭೆಯ ಕಾರ್ಯ ಕಲಾಪಗಳನ್ನು ನಡೆಸಿ ಕೊಡಬೇಕೆಂದು ಕುಲಪತಿಗಳನ್ನು ಕೋರಿದರು.

ಕುಲಪತಿಗಳು ಮಾತನಾಡಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರನ್ನು ಮತ್ತೊಮ್ಮೆ ಸಭೆಗೆ ಸ್ವಾಗತಿಸಿ, ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

**ವಿಷಯ ಸಂಖ್ಯೆ:1:** ದಿನಾಂಕ: 03/09/2020ರಂದು ಆನ್–ಲೈನ್ ಮೂಲಕ ತೆಗೆದುಕೊಳ್ಳಲಾದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ವಿಷಯಗಳ ಬಗೆಗಿನ ನಿರ್ಣಯಗಳನ್ನು/ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ದಿನಾಂಕ: 03-09-2020ರಂದು ಆನ್–ಲೈನ್ ಮೂಲಕ ತೆಗೆದುಕೊಳ್ಳಲಾದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸಲು ಸಭೆಗೆ ವಿಷಯವನ್ನು ಮಂಡಿಸಲಾಗಿದ್ದು, ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ ಸದಸ್ಯರ ಸಹಮತ ಕೋರಿದರು.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ: 03-09-2020ರಂದು ಆನ್–ಲೈನ್ ತಂತ್ರಾಂಶದ ಮೂಲಕ ತೆಗೆದುಕೊಳ್ಳಲಾದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ವಿದ್ಯಾವಿಷಯಕ ಪರಿಷತ್ತು ಸ್ಥಿರೀಕರಿಸಿತು.

**ವಿಷಯ ಸಂಖ್ಯೆ: 2:** 2019–20ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

ಕುಲಪತಿಯವರು ಮಾತನಾಡಿ, ಪ್ರತಿ ವರ್ಷದಂತೆ ಬೆಂಗಳೂರು ವಿಶ್ವವಿದ್ಯಾಲಯದ 2019–20ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರವನ್ನು ಸಿದ್ದಪಡಿಸಲಾಗಿದ್ದು, ಈ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ವಿತ್ತಾಧಿಕಾರಿಯವರನ್ನು ಕೋರಿದರು.

ವಿತ್ತಾಧಿಕಾರಿಯವರು ಬೆಂಗಳೂರು ವಿಶ್ವವಿದ್ಯಾಲಯದ 2019–20ನೇ ಸಾಲಿನ ವಾರ್ಷಿಕ ಲೆಕ್ಕಪತ್ರದ ಬಗ್ಗೆ ಸಭೆಗೆ ವಿವರಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ 2019–20ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ವಿದ್ಯಾವಿಷಯಕ ಪರಿಷತ್ತು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 47(2)ರಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

**ವಿಷಯ ಸಂಖ್ಯೆ: 3:** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಕರ್ನಾಟಕ ಸರ್ಕಾರ, ಬೆಂಗಳೂರು, ಇವರು ಪ್ರಸ್ತಾಪಿಸಿರುವ ಕಾಲೇಜುಗಳ ಸಂಯೋಜನೆಯ ಕುರಿತಂತೆ ಸಮಾನ ಕರಡು ಪರಿನಿಯಮಾವಳಿಯನ್ನು ವಿಶ್ವವಿದ್ಯಾಲಯದ ವತಿಯಿಂದ ರೂಪಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಕರ್ನಾಟಕ ಸರ್ಕಾರ, ಬೆಂಗಳೂರು, ಇವರು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಯುಜಿಸಿಯ ಮಾರ್ಗಸೂಚಿಯಂತೆ ಕಾಲೇಜುಗಳ ಸಂಯೋಜನೆಯ ಕುರಿತಂತೆ ಸಮಾನ ಕರಡು ಪರಿನಿಯಮಾವಳಿಯನ್ನು ಪ್ರಸ್ತಾಪಸಿದ್ದು, ಇದನ್ನು ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಿಕೊಂಡು ಸರ್ಕಾರಕ್ಕೆ ಪರಿನಿಯಾವಳಿಗಳ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿರುತ್ತಾರೆ. ಅದರಂತೆ, ವಿಶ್ವವಿದ್ಯಾಲಯದ ಪರಿನಿಯಮಾವಳಿ ಸಮಿತಿಯು ಇದನ್ನು ಪರಿಶೀಲಿಸಿ ತನ್ನ ಶಿಫಾರಸ್ಸನ್ನು ನೀಡಿದ್ದು, ಸದರಿ ಕರಡು ಪರಿನಿಯಮಾವಳಿ ಮತ್ತು ಶಿಫಾರಸ್ಸನ್ನು ಮಂಡಿಸಲಾಗಿದ್ದು, ಸಭೆಯು ಇದನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಕರ್ನಾಟಕ ಸರ್ಕಾರ, ಬೆಂಗಳೂರು, ಇವರು ಪ್ರಸ್ತಾಪಿಸಿರುವ ಕಾಲೇಜುಗಳ ಸಂಯೋಜನೆಯ ಕುರಿತಂತೆ ಕರಡು ಪರಿನಿಯಮಾವಳಿಯನ್ನು ವಿದ್ಯಾವಿಷಯಕ ಪರಿಷತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 41(2)ರಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

**ವಿಷಯ ಸಂಖ್ಯೆ: 4:** 2020–21ನೇ ಸಾಲಿನಿಂದ ಅಮಿತ ಬಿ.ಇಡಿ. ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ಅಮಿತ ಬಿ.ಇಡಿ. ಕಾಲೇಜಿಗೆ ಎನ್.ಸಿ.ಟಿ.ಇ. ಮಾನ್ಯತೆಯನ್ನು ಹಿಂಪಡೆದಿದ್ದು, ಈ ಕಾರಣ ಸಂಯೋಜನೆಯನ್ನು ಹಿಂಪಡೆಯಲು ವಿಷಯವನ್ನು ಮಂಡಿಸಲಾಗಿದೆ ಎಂದು ಸಭೆಗೆ ತಿಳಿಯಪಡಿಸಿದರು. ಡಾ॥ ಹಸೀನ್ ತಾಜ್, ಡೀನರು ಶಿಕ್ಷಣ ನಿಕಾಯ, ಅವರು ಮಾತನಾಡಿ ಎನ್.ಸಿ.ಟಿ.ಇ. ಮಾನ್ಯತೆ ಬಿ.ಇಡಿ. ಕಾಲೇಜಿಗೆ ಅತ್ಯವಶ್ಯಕಾವಗಿದ್ದು, ಎನ್.ಸಿ.ಟಿ.ಇ. ಅನುಮೋದನೆ ಇಲ್ಲದ ಕಾರಣ ಮಾನ್ಯತೆಯನ್ನು ಅವಶ್ಯಕವಾಗಿ ರದ್ದುಪಡಿಸಬಹುದಾಗಿದೆ ಎಂದು ತಿಳಿಸಿದರು. ಇತರ ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿದರು.

ನಿರ್ಣಯ:

ಚರ್ಚೆಯ ನಂತರ, 2020–21ನೇ ಸಾಲಿನಿಂದ ಅಮಿತ ಬಿ.ಇಡಿ. ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲು ವಿದ್ಯಾವಿಷಯಕ ಪರಿಷತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 63 ರಡಿಯಲ್ಲಿ ಪರಿಗಣಿಸಿ ಸಿಂಡಿಕೇಟ್ ಸಭೆಗೆ ರವಾನಿಸಲು ಅನುಮೋದಿಸಿತು.

ವಿಷಯ ಸಂಖ್ಯೆ: 5: 2020–21ನೇ ಸಾಲಿಗೆ ಲಾರ್ವಿನ್ ಇಂಟರ್‌ನ್ಯಾಷನಲ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್, ಬೆಂಗಳೂರು ಇದರ ಸಂಯೋಜನೆಯನ್ನು ಸ್ವಯಂ ಮುಚ್ಚುವ ಕಾರಣ ರದ್ದು ಪಡಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ಲಾರ್ವಿನ್ ಇಂಟರ್‌ನ್ಯಾಷನಲ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್, ಬೆಂಗಳೂರು ಇವರು ವಿದ್ಯಾರ್ಥಿ ಪ್ರವೇಶದ ಕೊರತೆಯಿಂದಾಗಿ ಕಾಲೇಜನ್ನು ಸ್ವಯಂ ಮುಚ್ಚಲು ಮನವಿ ಸಲ್ಲಿಸಿದ್ದು, ಇದನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.

ನಿರ್ಣಯ:

ಚರ್ಚೆಯ ನಂತರ, 2020–21ನೇ ಸಾಲಿನಿಂದ ಲಾರ್ವಿನ್ ಇಂಟರ್‌ನ್ಯಾಷನಲ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್, ಬೆಂಗಳೂರು ಈ ಕಾಲೇಜನ್ನು ಸ್ವಯಂ ಮುಚ್ಚುವ ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 65 ರಡಿಯಲ್ಲಿ ಪರಿಗಣಿಸಿ ಅನುಮೋದಿಸಿ ಸಿಂಡಿಕೇಟ್ ಸಭೆಗೆ ರವಾನಿಸಲು ನಿರ್ಣಯಿಸಿತು.

ವಿಷಯ ಸಂಖ್ಯೆ: 6: Approval for introduction of B.Sc.(Hons) Agricultural Skill and Entrepreneurship programme at GPS Institute of Agricultural Management under Section 66(1) of KSU Act, 2000.

The Vice-Chancellor informed that GPS Institute of Agricultural Management has already been recognized as a Centre for Specialized Studies during the academic year 2018-19. Now the said Institute has proposed to introduce **B. Sc. (Hons.) Degree course in Agricultural Skill and Entrepreneurship programme (I to VIII semesters) from the academic year 2020-21**. It is a skill based Job oriented course. Some members sought clarification as to whether the course is related to Agricultural Science or not. The Vice-Chancellor clarified that the course is related to marketing of Agricultural Products and Entrepreneurship programme. The said Programme has been approved by the NSDC, Government of India, and the Expert

Committee has recommended for the introduction of B.Sc.(Hons) Agricultural Skill and Entrepreneurship programme and the report was placed before the House for its consideration. Further, it is proposed to introduce the said programme at PG level in the University.

***Resolution:***

After detailed deliberations, the Academic Council resolved to approve the recommendations of the Expert Committee for introduction of B.Sc.(Hons) Agricultural Skill and Entrepreneurship programme at GPS Institute of Agricultural Management under Section 66(1) of KSU Act, 2000 from the year 2020-21.

ವಿಷಯ ಸಂಖ್ಯೆ: 7: ಬೆಂಗಳೂರು ವಿಶ್ವವಿದ್ಯಾಲಯದ ಗ್ರಾಮೀಣಾಭಿವೃದ್ಧಿ ಅಧ್ಯಯನ ಕೇಂದ್ರದ 3ನೇ ಸೆಮಿಸ್ಟರ್ ವಿದ್ಯಾರ್ಥಿಗಳ Open Elective Paper ಹಂಚಿಕೆ ಮತ್ತು ಮೌಲ್ಯಮಾಪನ ಕುರಿತು ದಿನಾಂಕ: 26/11/2020ರಂದು ಜರುಗಿದ ಕಲಾ, ವಿಜ್ಞಾನ, ವಾಣಿಜ್ಯ, ಕಾನೂನು ಮತ್ತು ಶಿಕ್ಷಣ ನಿಖಾಯಗಳ ಡೀನರ ಸಭೆಯ ನಡಾವಳಿಗಳನ್ನು ಪರಿಗಣಿಸುವ ಬಗ್ಗೆ.

ಕುಲಪತಿಯವರು ಮಾತನಾಡಿ, ಎಂ.ಎ.–ಗ್ರಾಮೀಣಾಭಿವೃದ್ಧಿ ಅಧ್ಯಯನ ಕೇಂದ್ರದಲ್ಲಿ, ಚಾಯ್ಸ್ ಬೇಸ್ಡ್ ಕ್ರೆಡಿಟ್ ಸಿಸ್ಟಮ್‌ನ ಅನ್ವಯ ಸದರಿ ವಿಭಾಗದ ವಿದ್ಯಾರ್ಥಿಗಳು ಬೇರೆ ವಿಭಾಗಗಳ Open Elective Paper ಪತ್ರಿಕೆ ತೆಗೆದುಕೊಳ್ಳಬೇಕಿತ್ತು ಆದರೆ, ಮಾಹಿತಿ ಕೊರತೆಯಿಂದಾಗಿ ಅದೇ ವಿಭಾಗದ ವಿಷಯವನ್ನು 3.6 Rural Development and co-operative Managementನ್ನು ಅಭ್ಯಾಸ ಮಾಡಿ ಪರೀಕ್ಷೆಗಳನ್ನು ತೆಗೆದುಕೊಂಡಿರುತ್ತಾರೆ, ಆ ಕಾರಣದಿಂದ ವಿದ್ಯಾರ್ಥಿಗಳ ಫಲಿತಾಂಶಗಳು ಬಿಡುಗಡೆಯಾಗಿರಲಿಲ್ಲ, ಈ ಬಗ್ಗೆ ಡೀನರುಗಳ ಸಭೆಯನ್ನು ಕರೆಯಲಾಗಿದ್ದು, "ಒಂದು ಬಾರಿಯ ಅವಕಾಶ"ದಂತೆ ಪರಿಗಣಿಸಿ ಈ ವಿಭಾಗದ 3ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಜನವರಿ/ಫೆಬ್ರವರಿ 2020ರಲ್ಲಿ ನಡೆದ ಪರೀಕ್ಷೆಯ ಫಲಿತಾಂಶ ಬಿಡುಗಡೆಗೊಳಿಸಬಹುದಾಗಿರುತ್ತದೆ ಎಂದು ಡೀನರ ಸಭೆಯು ಶಿಫಾರಸು ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು.

ವಿತ್ತಾಧಿಕಾರಿಯವರು ಮಾತನಾಡಿ ಇದರಿಂದ ವಿದ್ಯಾರ್ಥಿಗಳಿಗೆ ಮುಂದೆ ಭವಿಷ್ಯದಲ್ಲಿ ಆಗಬಹುದಾದ ತೊಡಕುಗಳು ಏನಾದರೂ ಇವೆಯೇ ಎಂದರು, ಪ್ರೊ. ಜಯಕುಮಾರ್ ಜಿ ರೆಡ್ಡಿಯವರು ಡೀನರು ಸಮಿತಿಯು ತೆಗೆದುಕೊಂಡಿರುವ ನಿರ್ಣಯವು ಸೂಕ್ತವಾದದು ಎಂದರು. ಕುಲಸಚಿವರು (ಮೌಲ್ಯಮಾಪನ) ಮಾತನಾಡಿ, ಇದರಿಂದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಯಲ್ಲಿ ಯಾವುದೇ ತೊಂದರೆಯಾಗುವುದಿಲ್ಲ ಆದರೆ, ಯಾರದರೂ Open Elective Paper ಪತ್ರಿಕೆ ಬದಲಾಗಿ ಬೇರೆ ಪತ್ರಿಕೆಗಳನ್ನು ತೆಗೆದುಕೊಂಡಿರುವುದನ್ನು ಉದ್ದೇಶ ಪೂರ್ವಕವಾಗಿ ಪಿರ್ಯಾದು ನೀಡಿದಲ್ಲಿ ತೊಂದರೆ ಆಗಬಹುದು ಎಂದರು. ಪ್ರೊ. ರಾಮಕೃಷ್ಣ ದಾಮ್ಲೆ ಅವರು ಮಾತನಾಡಿ, ಡೀನರ ಸಮಿತಿಯ ಶಿಫಾರಸ್ಸಿನ ಪ್ರಕಾರ ಸದರಿ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸಬಹುದು ಎಂದು ತಿಳಿಸಿದರು.

ಮುಂದುವರೆದು, ಕುಲಪತಿಗಳು ಮಾತನಾಡಿ, Choice Based Credit System ನ ವಿನಿಯಮದ ಕಲಮು 21ರಲ್ಲಿ ಕುಲಪತಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಶೈಕ್ಷಣಿಕ ವಿಷಯಗಳ ತೊಡಕುಗಳನ್ನು ನಿವಾರಿಸಲು ಕುಲಪತಿಗಳ ಹಂತದಲ್ಲಿ ಕ್ರಮ ಕೈಗೊಳ್ಳಬಹುದಾಗಿದ್ದು, ನಂತರ ವಿದ್ಯಾವಿಷಯಕ ಪರಿಷತ್ತಿನ ಅನುಸಮರ್ಥನೆಗೆ ಮಂಡಿಸಬಹುದಾಗಿದೆ ಎಂದು ತಿಳಿಸಿದರು. ಪ್ರಸ್ತುತ ಸಮಸ್ಯೆಯ ಬಗ್ಗೆ ಡೀನರ ಸಭೆಯನ್ನು ಕರೆದು ಚರ್ಚಿಸಿ, ಈ ನಿರ್ಣಯ ತೆಗೆದುಕೊಳ್ಳಲಾಗಿದೆ. ಆದುದರಿಂದ ಡೀನರ ಸಮಿತಿಯ ಸಲಹೆಯಂತೆ ಒಂದು ಬಾರಿಯ ಅವಕಾಶವೆಂದು ಇದನ್ನು ಪರಿಗಣಿಸಬಹುದಾಗಿದೆ ಎಂದರು.

**ನಿರ್ಣಯ:**

ಸುದೀರ್ಘ ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಗ್ರಾಮೀಣಾಭಿವೃದ್ಧಿ ಅಧ್ಯಯನ ಕೇಂದ್ರದ 3ನೇ ಸೆಮಿಸ್ಟರ್ ವಿದ್ಯಾರ್ಥಿಗಳ Open Elective Paper ಹಂಚಿಕೆ ಮತ್ತು ಮೌಲ್ಯಮಾಪನ ಕುರಿತು ದಿನಾಂಕ: 26-11-2020ರಂದು ಜರುಗಿದ ಬೆಂಗಳೂರು ವಿಶ್ವವಿದ್ಯಾಲಯದ ಕಲಾ, ವಾಣಿಜ್ಯ ಮತ್ತು ಕಾನೂನು ನಿಖಾಯಗಳ ಡೀನರ ಸಭೆಯ ನಿರ್ಣಯವನ್ನು ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿತು.

ಮುಂದುವರೆದು, ಎಂ.ಎ.-ಗ್ರಾಮೀಣಾಭಿವೃದ್ಧಿ ಅಧ್ಯಯನ ಕೇಂದ್ರದ 3ನೇ ಸೆಮಿಸ್ಟರ್ ವಿದ್ಯಾರ್ಥಿಗಳು ಈಗಾಗಲೇ Open Elective Paper 3.6 Rural Development and co-operative Managementನ್ನು ಅಧ್ಯಯನ ಮಾಡಿ, ಸದರಿ ವಿಷಯದಲ್ಲಿ ಪರೀಕ್ಷೆ ತೆಗೆದುಕೊಂಡಿರುವ ಕ್ರಮವನ್ನು"ಒಂದು ಬಾರಿಯ ಅವಕಾಶ" ಎಂಬಂತೆ ಪರಿಗಣಿಸಿ ಈ ವಿಭಾಗದ 3ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಜನವರಿ/ಫೆಬ್ರವರಿ 2020ರಲ್ಲಿ ನಡೆದ ಪರೀಕ್ಷೆಯ ಫಲಿತಾಂಶ ಬಿಡುಗಡೆಗೊಳಿಸಲು ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿತು.

<u>ವಿಷಯ ಸಂಖ್ಯೆ: 8:</u> ಎನ್.ಎಂ.ಕೆ.ಆರ್.ವಿ. ಮಹಿಳಾ ಕಾಲೇಜು (ಸ್ವಾಯತ್ತಾ) ಇಲ್ಲಿನ ಸಂಶೋಧನಾ ಕೇಂದ್ರದ ರಸಾಯನ ಶಾಸ್ತ್ರಕ್ಕೆ ಪುರುಷ ವಿದ್ಯಾರ್ಥಿಗಳನ್ನು ಪ್ರವೇಶಾತಿ ಪಡೆಯುವ ಬಗ್ಗೆ.

ಕುಲಪತಿಗಳು ಮಾತನಾಡಿ, ಎನ್.ಎಂ.ಕೆ.ಆರ್.ವಿ. ಮಹಿಳಾ ಕಾಲೇಜು (ಸ್ವಾಯತ್ತಾ) ಇದಕ್ಕೆ ರಸಾಯನ ಶಾಸ್ತ್ರ ವಿಷಯದಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನೀಡಲಾಗಿರುತ್ತದೆ. ಪ್ರಸ್ತುತ ಕೇವಲ ಒಬ್ಬ ಮಹಿಳಾ ವಿದ್ಯಾರ್ಥಿಯನ್ನು ಮಾತ್ರ ಪಿ.ಹೆಚ್.ಡಿ ಪದವಿಗೆ ವಿಶ್ವವಿದ್ಯಾಲಯದಿಂದ ಪ್ರಾಯೋಜಿಸಲಾಗಿದೆ. ಸೀಟುಗಳು ಉಳಿದಿರುವ ಕಾರಣ, ಕಾಲೇಜಿನ ಪ್ರಾಂಶುಪಾಲರು ಪುರುಷ ವಿದ್ಯಾರ್ಥಿಗಳನ್ನು ಪ್ರಾಯೋಜಿಸಿ ಪ್ರವೇಶಾತಿ ಮಾಡಿಕೊಳ್ಳಲು ಅನುಮತಿಯನ್ನು ನೀಡುವಂತೆ ಕೋರಿರುತ್ತಾರೆ. ಸದರಿ ಕಾಲೇಜು ಮಹಿಳಾ ಕಾಲೇಜು ಆಗಿದ್ದು, ಪಿ.ಹೆಚ್.ಡಿ ಪದವಿಯಲ್ಲಿ ಕಾಲೇಜಿನ ಮಾರ್ಗದರ್ಶಕದೊಂದಿಗೆ ಸಂವಾದ ಹಾಗೂ ತಮ್ಮ ಸಂಶೋಧನ ಕಾರ್ಯಕ್ಕೆ ಪ್ರಯೋಗ ಶಾಲೆಯನ್ನು ಮಾತ್ರ ವಿದ್ಯಾರ್ಥಿಗಳು ಬಳಸುತ್ತಾರೆ. ಈ ಹಿನ್ನೆಲೆಯಲ್ಲಿ ಕಾಲೇಜಿನವರ ಮನವಿಯನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸದರಿ ಕಾಲೇಜು ಮಹಿಳಾ ಕಾಲೇಜು ಆಗಿದ್ದು, ಕಾಲೇಜಿಗೆ ಪುರುಷ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದರ ಬಗ್ಗೆ ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಇಂತಹುದೇ ಕೆಲವು ಪ್ರಕರಣಗಳಲ್ಲಿ ಸರ್ಕಾರವು ಬೇರೆ ಸ್ವಾಯತ್ತಾ ಕಾಲೇಜುಗಳಿಗೆ ಅನುಮತಿಯನ್ನು ನೀಡಿರುವುದನ್ನು ಸಭೆಯ ಗಮನಕ್ಕೆ ತಂದರು. ಕೆಲವು ಸದಸ್ಯರುಗಳು ಮಾತನಾಡಿ, ಇದಕ್ಕೆ ಸರ್ಕಾರದ ಅನುಮತಿಯನ್ನು ಪಡೆಯುವುದು ಉತ್ತಮವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

<u>ನಿರ್ಣಯ:</u>

ಸುದೀರ್ಘ. ಚರ್ಚೆಯ ನಂತರ, ಎನ್.ಎಂ.ಕೆ.ಆರ್.ವಿ. ಮಹಿಳಾ ಕಾಲೇಜು (ಸ್ವಾಯತ್ತಾ) ಇಲ್ಲಿನ ಸಂಶೋಧನಾ ಕೇಂದ್ರದ ರಸಾಯನ ಶಾಸ್ತ್ರಕ್ಕೆ ಪುರುಷ ವಿದ್ಯಾರ್ಥಿಗಳನ್ನು ಪ್ರವೇಶಾತಿ ಪಡೆಯುವ ವಿಷಯವಾಗಿ ಸರ್ಕಾರಕ್ಕೆ ಸೂಕ್ತವಾದ ಪ್ರಸ್ತಾವನೆಯನ್ನು ಸಲ್ಲಿಸಿ, ಸರ್ಕಾರದ ಅನುಮೋದನೆಯ ನಂತರ ಅನುಮತಿ ನೀಡಲು ವಿದ್ಯಾವಿಷಯಕ ಪರಿಷತ್ತು ನಿರ್ಣಯಿಸಿತು.

<u>ವಿಷಯ ಸಂಖ್ಯೆ: 9:</u> ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರದ ಸ್ಥಾಪನೆ ಸಂಬಂಧಪಟ್ಟಂತೆ ಕರಡು ಪರಿನಿಯಮಾವಳಿಗಳನ್ನು ಅನುಮೋದಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ಸರ್ಕಾರ ಅನುದಾನದಿಂದ ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರದ ಸ್ಥಾಪನೆಯನ್ನು ಮಾಡಲಾಗಿದ್ದು, ಇದರ ಮುಂದಿನ ಶೈಕ್ಷಣಿಕ ಚಟುವಟಿಕೆಗಳನ್ನು ಗಮನದಲ್ಲಿಟ್ಟುಕೊಂಡು ಕರಡು ಪರಿನಿಯಮಾವಳಿಯನ್ನು ಸಮಿತಿಯು ರಚಿಸಿದ್ದು, ಇದನ್ನು ಪರಿಗಣಿಸಲು ಕೋರಿದರು.

<u>ನಿರ್ಣಯ:</u>

ಚರ್ಚೆಯ ನಂತರ, ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರದ ಸ್ಥಾಪನೆ ಸಂಬಂಧಪಟ್ಟಂತೆ ಕರಡು ಪರಿನ್ನಿಯಮಾವಳಿಗಳನ್ನು ವಿದ್ಯಾವಿಷಯಕ ಪರಿಷತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ ರಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

<u>ವಿಷಯ ಸಂಖ್ಯೆ: 10</u>: To consider the Syllabus and Scheme of Examination for starting of four years **B. Sc. (Hons.) Degree course in Agricultural Skill and Entrepreneurship programme (I to VIII semesters) from the academic year 2020-21** to be run by the GPS Institute of Agricultural Management, Bengaluru.

The Vice-Chancellor informed the House that, GPS Institute of Agricultural Management which is recognized as a specialized study centre is introducing B.Sc.(Hons) Agricultural Skill and Entrepreneurship programme. The Board of Studies has framed the Syllabus which has been approved by the Faculty of Science by Circulation and the same is placed before the Academic Council for its consideration.

***Resolution:***

After detailed deliberations, the Academic Council resolved to approve the Syllabus and Scheme of Examination relating to **B. Sc. (Hons.) Degree course in Agricultural Skill and Entrepreneurship programme (I to VIII semesters) from the academic year 2020-21** at GPS Institute of Agricultural Management, Bengaluru.

ವಿಷಯ ಸಂಖ್ಯೆ: 11: To consider the proceedings of the Faculty of Commerce (by Circulation) at its meeting held on 26/12/2020.

The Vice-Chancellor informed the House about restructuring of courses under Commerce Faculty which has been approved by the Board of Studies in Commerce, and the Faculty of Commerce by Circulation on 26/12/2020. The said proceedings of the Board of Studies and Faculty of Commerce are placed before the Academic Council for its consideration.

**Resolution:**

After detailed discussions, the Academic Council resolved to approve the proceedings of the Faculty of Commerce (by Circulation) dated: 26/12/2020.

**GENERAL DISCUSSION:-**

1. Prof. Ramakrishna Dhamle brought to the notice of the Academic Council that the credits of PG courses has not been reduced on par with the credits of PG courses of other Universities in the State/Country, and the credits offered at PG level has resulted in the increase of workload of the PG departments of Bangalore University. He urged to look in to the same and arrange for restructuring the credit system as per the UGC norms. The Vice-Chancellor informed that the matter will be looked into.

2. ಡಾ. ಸುಧೀರ್ ಪೈ. ಪ್ರಾಂಶುಪಾಲರು, ಆರ್.ಎನ್.ಎಸ್. ಪ್ರಥಮ ದರ್ಜೆ ಕಾಲೇಜು, ಇವರು ಮಾತನಾಡಿ, ಅವರ ಕಾಲೇಜಿನ ಸಂಸ್ಥಾಪನಾ ಅಧ್ಯಕ್ಷರಾದ ಆರ್.ಎನ್. ಶೆಟ್ಟಿಯವರ ಸ್ಮರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಕುಲಪತಿಗಳು, ಕುಲಸಚಿವರು, ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ ಆಮಂತ್ರಣ ನೀಡಿದರು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

**ಕುಲಪತಿಯವರು** 5/2/21